ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |
|---|

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.
ಸಿ.ಸಿ. ನಂ.ಃ 117/2019

.......................................................................

CW 08
PW 07

ಹೆಸರು : ವಿಠ್ಠು ಜಂಗ್ಲೆ
ತಂದೆಯ ಹೆಸರು : ಜಾನು
ವಯಸ್ಸು : 45 ವರ್ಷ
ಉದ್ಯೋಗ : ಕೂಲಿ ಕೆಲಸ
ವಾಸಸ್ಥಳ : ಅಂಬಿಕಾನಗರ.

ದಿನಾಂಕ 23-03-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಚಾಸಾ 9 ರವರು ಪರಿಚಯವಿದ್ದಾರೆ.

ಸಾಕ್ಷಿಗೆ ನಿಪಿ 3 ಅನ್ನು ತೋರಿಸಲಾಗಿ ಸಾಕ್ಷಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅವರ ಸಹಿಯನ್ನು ನಿಪಿ 3 ಸಿ ಎಂದು ಗುರುತಿಸಲಾಯಿತು.

ಸುಮಾರು 10 ವರ್ಷಗಳ ಹಿಂದೆ ನಾಗಝರಿಕೊಳ್ಳದ ಹತ್ತಿರ ಸಂಜೆ 06-30 ರ ಸಮಯದಲ್ಲಿ ಅರಣ್ಯ ಇಲಾಖೆಯವರು ಉಡದ ಶಿಖಾರಿ ಇದೆ ಎಂದು ಕರೆಯಿಸಿದ್ದರು. ನಂತರ ನಾವೆಲ್ಲರೂ ಕುಳಿತಾಗ ನಾಗಝರಿಕೊಳ್ಳದ ಹತ್ತಿರ ಕಾಲುದಾರಿಯಲ್ಲಿ ಕುಳಿದಾಗ ಸಂಜೆ 06-00 ಗಂಟೆಗೆ ಎರಡು ನಾಯಿಗಳು ಬಂದವು. ನಂತರ ಇಬ್ಬರು ವ್ಯಕ್ತಿಗಳು ಬಂದರು. ಅವರ ಬಳಿ ಒಂದು ಟವೆಲ್ ಅದರಲ್ಲಿ ಉಡವನ್ನು ಕಟ್ಟಿದ್ದರು. ಟವೆಲ್ ಮೇಲೆ ರಕ್ತದ ಕಲೆ ಇತ್ತು. ಅದನ್ನು ಏಕೆ ಹಿಡಿದಿರುತ್ತೀರಿ ಎಂದು ಕೇಳಿದಾಗ ಅವರು ತಿನ್ನಲು ತೆಗೆದುಕೊಂಡು ಹೋಗುತ್ತಿದ್ದೇವೆ ಎಂದು ಹೇಳಿದರು. ಉಡದ ಬಾಲ ಮತ್ತು ನಾಲಿಗೆಯನ್ನು ಕತ್ತರಿಸಲಾಗಿದೆ ಎಂದು ತಿಳಿಸಿದರು. ಆರೋಪಿತರು ತಮ್ಮ ಹೆಸರನ್ನು ನಿನ್ನು ಪೊಂಡೆ ಮತ್ತು ಬಾಬು ಜೋರೆ ಎಂದು ತಿಳಿಸಿದರು. ನಂತರ ನಮ್ಮನ್ನು ಅಲ್ಲಿಂದ ಅರ್ಧ ಕಿ.ಮೀ ದೂರದಲ್ಲಿ ಕರೆದುಕೊಂಡು ಹೋದರು ಅಲ್ಲಿ ಸಾಗವಾಣಿ ಗಿಡ ತೋರಿಸಿ ಉಡ ಗಿಡ ಹತ್ತುವಾಗ ಹಿಡಿದಿರುತ್ತೇವೆ ಎಂದು ಹೇಳಿದರು. ಗಿಡವನ್ನು ಆರೋತರೆ

ತೋರಿಸಿದರು. ಅರಣ್ಯ ಇಲಾಖೆಯವರು ಸದರಿ ಸಾಗವಾಣಿ ಗಿಡವನ್ನು ಅಳತೆ ಮಾಡಿದರು. ನಂತರ ಉಡ, ಟವೆಲ್ ಮತ್ತು ಕೊಡಲಿಯನ್ನು ಕಚೇರಿಗೆ ತಂದೆರು. ಜಾಗದಲ್ಲಿ ಪಂಚನಾಮೆಯನ್ನು ಸಂಜೆ 07-00 ಗಂಟೆಯ ವರೆಗೆ ಜರುಗಿಸಿ ನಮ್ಮ ಸಹಿ ಪಡೆದರು. ಪಂಚನಾಮೆಯನ್ನು ನಮ್ಮ ಸಮಕ್ಷಮ ಬರೆದರು. ಆಗ ನಾನು ಮತ್ತು ಚಾಸಾ 9 ರವರು ಇದ್ದೇವು. ಸಾಕ್ಷಿಗೆ ನಿಪಿ 4 ಅನ್ನು ತೋರಿಸಲಾಗಿ ಸದರಿ ಪಂಚನಾಮೆಯನ್ನು ಉಡವನ್ನು ಬಿಡುವ ಸಮಯದಲ್ಲಿ ಮಾಡಿರುತ್ತಾರೆ ಎನ್ನುತ್ತಾರೆ. ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 4 ಬಿ ಎಂದು ಗುರುತಿಸಲಾಯಿತು. ಜಪ್ತುಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ. 1 ಮತ್ತು 2 ಎಂದು ಗುರುತಿಸಲಾಗಿದೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಒಬ್ಬರು ಮರಣ ಹೊಂದಿರುತ್ತಾರೆ. ಆರೋಪಿ 1 ರವರು ಈ ದಿನ ಗೈರು ಹಾಜರಿದ್ದು ಅವರನ್ನು ಗುರುತಿಸುವಿಕೆಯ ಬಗ್ಗೆ ಅವರ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 29-04-2009 ರಂದು ಬರೆಯಲಾಯಿತು ಎಂದರೆ ಸರಿ. ಆ ದಿನ ಮಧ್ಯಾಹ್ನ 03-00 ಗಂಟೆಗೆ ಅರಣ್ಯ ಇಲಾಖೆಯವರು ನಿಮಗೆ ಭಾತ್ಮಿ ವಿಷಯ ತಿಳಿಸಿ ಪಂಚರಾಗಲು ಕೋರಿದರು ನೀವು ಒಪ್ಪಿಕೊಂಡ ನಂತರ ಅಂಬಿಕಾನಗರಕ್ಕೆ ಬಂದು ಅಲ್ಲಿಂದ ಘಟನಾ ಜಾಗಕ್ಕೆ ಹೋಗಿರುತ್ತೀರಿ ಎಂದರೆ ಸರಿ. ಆರೋಪಿತರು ಮತ್ತು ನಾಯಿಗಳು ಬಂದಾಗ 06-30 ಆಗಿತ್ತು ಎಂದರೆ ಸರಿ. ಆರೋಪಿತರು ಮತ್ತು ನಾಯಿಗಳು ಬಂದ ಜಾಗದಿಂದ ಸಾಗವಾಣಿ ನೆಡತೋಪು ಅರ್ಧ ಕಿ.ಮೀದೂರದಲ್ಲಿ ಇತ್ತು. ಸಾಗವಾಣಿ ನೆಡತೋಪಿನಲ್ಲಿ ನಾಯಿಗಳು ಉಡವನ್ನು ಓಡಾಡಿಸುತ್ತಿರುವಾಗ ಅದು ಸುಸ್ತಾಗಿ ಗಿಡ ಏರುತ್ತಿರುವಾಗ ಉಡವನ್ನು ಹಿಡಿದೆವು ಎಂದು ಹೇಳಿ ಜಾಗವನ್ನು ತೋರಿಸಿದರು. ಅರಣ್ಯ ಇಲಾಖೆಯವರು ಉಡ, ಟವೆಲ್ ಮತ್ತು ಕೊಡಲಿಯನ್ನು ನಿಮ್ಮ ಸಮಕ್ಷಮ ಜಪ್ತುಪಡಿಸಿಕೊಂಡು ಟಾರ್ಚ ಬೆಳಕಿನಲ್ಲಿ ಪಂಚನಾಮೆ ಬರೆದು ಓದಿ ಹೇಳಿದ ನಂತರ ಸಹಿ ಮಾಡಿರುತ್ತೀರಿ ಎಂದರೆ ಸರಿ. ದಿನಾಂಕ 02-05-2009 ರಂದು ಉಡವನ್ನು ಬಿಡುವ ಸಮಯದಲ್ಲಿ ಪಂಚನಾಮೆಯನ್ನು ನಿಮ್ಮ ಸಮಕ್ಷಮ ಬೆಳಗ್ಗೆ 09-45 ಕ್ಕೆ ಜರುಗಿಸಿ ನಿಮ್ಮ ಸಹಿ ಪಡೆದರು ಎಂದರೆ ಸರಿ. ಈ ವಿಚಾರವಾಗಿ ದಿನಾಂಕ 29-04-2009 ರಂದು ಹೇಳಿಕೆ ನೀಡಿರುತ್ತೀರಿ ಎಂದರೆ ಸರಿ.

**<u>ಪಾಟೀ ಸವಾಲುಃ</u>** ಆರೋಪಿತರ ಪರ ಶ್ರೀ ಎ ಎಫ್ ಕೆ ವಕೀಲರು ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.